ಸಾಯುವುದನ್ನು ಕಾಣಬಹುದು, ನಮ್ಮ ಹೃದಯದ ಬಡಿತದಂತೆ ಕೇಳಿಸಿಕೊಳ್ಳಬಹುದು. ವರ್ತಮಾನ ಭವಿಷ್ಯಗಳೆಲ್ಲ ಭೂತವಾಗುವ ವಿಸ್ಮಯವನ್ನ ಕಾಣಬಹುದಾದ ಏಕಮೇವ ಕಾಲಯಂತ್ರವೆಂದರೆ ಅದು ಗಡಿಯಾರ. ಹಿಸ್ಸೆಯ ಪೂರ್ವದಲ್ಲಿ ನಮ್ಮ ಮನೆಯಲ್ಲಿ ಗೋಡೆಯ ಮೇಲಿಟ್ಟ ಗಡಿಯಾರದ ಪಕ್ಕದಲ್ಲಿಯೇ ಈಶ್ವರನ ಒಂದು ದೊಡ್ಡ ಫೋಟೊ ಇದ್ದಿತ್ತು. ಲಂಬವಾಗಿರುವ ಮಣ್ಣಿನ ಗೋಡೆಗೆ ಅಡ್ಡಪಟ್ಟಿ ಹೊಡೆದು, ಮೇಲಿನ ಮಹಡಿಯ ಹಲಗೆಗೆ 'ವಿ' ಆಕಾರದಲ್ಲಿ ಹೊಂದಿಸಿ ನಿಲ್ಲುವಂತೆ ಫೋಟೊಗಳನ್ನು ಇರಿಸುವುದು ಆಗಿನ ಹಳ್ಳಿ ಮನೆಗಳ ಪದ್ಧತಿ. (ಗೋಡೆ ಮಣ್ಣಿನದಾಗಿರುತ್ತಿತ್ತು, ಅದಕ್ಕೆ ಒಂದು ಅಡ್ಡಪಟ್ಟಿ ರೀಪು ಹೊಡೆಯುತ್ತಿದ್ದರು. ಮೇಲೆ ಮಹಡಿಗೆ ದಪ್ಪ ಮರದಹಲಗೆ ಹಾಕಿ ಅದರ ಮೇಲೆ ಮಣ್ಣು ಹೊಯ್ದು, ಮೆತ್ತು ಅನ್ನುವ ಮಹಡಿ ಮಾಡಿರುತ್ತಿದ್ದರು.) ಆ ಈಶ್ವರನ ಫೋಟೊದ ಹಿಂದೆ ಸದಾ ಕಾಲ ಗುಬ್ಬಚ್ಚಿ ಗೂಡು ಕಟ್ಟಿಕೊಂಡಿರುತ್ತಿತ್ತು. ಸೀಜನ್ನಿನಲ್ಲಿ ಗುಬ್ಬಿ ಅದರಲ್ಲಿ ಮೊಟ್ಟೆಯಿಟ್ಟು ಮರಿ ಮಾಡುತ್ತಿತ್ತು. ಈಗ ಆ ಚಿತ್ರ ಕಣ್ಣ ಮುಂದೆ ಬಂದಾಗ ಅನ್ನಿಸುವುದು – ವಾಹ್, ಏನು ವೈರುಧ್ಯ ವಿಸ್ಮಯಗಳು ಬದುಕಲ್ಲಿ. ಸಮಯ ಕೊಲ್ಲುತ್ತಿರುವ ಗಡಿಯಾರ; ಪಕ್ಕದಲ್ಲಿ ಲಯಕಾರಕನಾಗಿರುವ ಶಿವನ ಫೋಟೊ, ಅದರ ಹಿಂದೆಯೇ ಹೊಸದಾಗಿ ಜೀವ ತಳೆಯಲಿರುವ ಗುಬ್ಬಿ ಮೊಟ್ಟೆಗಳು.

ಗಡಿಯಾರಕ್ಕೂ ಹೃದಯ ಬಡಿತಕ್ಕೂ ಸಂಬಂಧವಿದ್ದೀತೇ ಎನ್ನುವ ಒಂದು ಪ್ರಶ್ನೆ ಉಳಿದುಕೊಂಡುಬಿಟ್ಟಿತಲ್ಲವೆ? ನಾವು ದೈಹಿಕ ಕೆಲಸ ಮಾಡಿದಾಗ, ಇಲ್ಲವೇ ಓಡಿದಾಗ, ಜಾಗಿಂಗ್ ಮಾಡಿದಾಗ, ಜಿಮ್ ಮಾಡಿದಾಗ ಹೃದಯದ ಬಡಿತ ಜೋರಾಗುತ್ತದೆ. ಅದು ಸಹಜ. ಆದರೆ, ಗಡಿಯಾರದ ಟಿಕ್ ಟಿಕ್ ಹಾಗಲ್ಲ. ಹಾಗಾಗಕೂಡದು. ಹಾಗಾದಲ್ಲಿ ಸಮಯವೇ ವ್ಯತ್ಯಾಸವಾಗುತ್ತದೆ. ಮತ್ತು ಎಲ್ಲ

